# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಕೆಂಪೇಗೌಡ ವಾರ್ಡ್ ನಂ-01ರಲ್ಲಿ ದಿನಾಂಕ: 02-01-2020 ರಂದು ನಡೆದ ಸಮಿತಿ ಸಭಾ ನಡವಳಿ.

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ರಜನಿಕಾಂತ್ ಮಲ್ಲಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಮಲ್ಲಿನಾಥ ಮಲ್ಕಾಪುರ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿ.
3. ಶ್ರೀ.ಸುಂದರೇಶ್ ಸಹಾಯಕ ಅಭಿಯಂತರರು ಯೋಜನೆ.
4. ಶ್ರೀ.ಬಾಬು ರೆಡ್ಡಿ ಸಹಾಯಕ ಅಭಿಯಂತರರು ವಿದ್ಯುತ್
5. ಶ್ರೀ. ವೆಂಕಟೇಶ್ ಮೂರ್ತಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಸದಸ್ಯರು,
6. ಶ್ರೀ.ವಿವೇಕ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01.

ವಾರ್ಡ್ ಸಮಿತಿಯ ಪ್ರಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ವಾರ್ಡ್ ನಂ -01ರ ವ್ಯಾಪ್ತಿಯಲ್ಲಿ ನೆಹರು ನಗರದಲ್ಲಿರುವ ಸಾಯಿ ಗೋಲ್ಡ್ ಪ್ಯಾಲೇಸ್ ಹತ್ತಿರ ಬ್ಲಾಕ್ ಸ್ಪಾಟ್ ತೆರವುಗೊಳಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. | ಹಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ ನಂ-01) | ಆರೋಗ್ಯ ವೈದ್ಯಾಧಿಕಾರಿಗಳು (ಯಲಹಂಕ ವಲಯ) |
| 02 | ವಾರ್ಡ್ ನಂ -01ರ ರಸ್ತೆಗಳಲ್ಲಿ ಮರದ ರೆಂಬೆಗಳು ರಸ್ತೆಗೆ ಅಡ್ಡವಾಗಿರುವುದರಿಂದ ಸದರಿ ರೆಂಬೆಗಳನ್ನು ಕಟಾವುಮಾಡುವಂತೆ ಸಭೆಯಲ್ಲಿ ಚರ್ಚಿಸಲಾಯಿತು. | ವಲಯ ಅರಣ್ಯಾಧಿಕಾರಿಗಳು (ಯಲಹಂಕ ವಲಯ) | ವಲಯ ಅರಣ್ಯಾಧಿಕಾರಿಗಳು (ಯಲಹಂಕ ವಲಯ) |
| 03 | ವಾರ್ಡ್ ನಂ -01ರ ವ್ಯಾಪ್ತಿಯಲ್ಲಿರುವ ಗ್ರಂಥಾಲಯದ ಕಟ್ಟಡ ಸೋರುತ್ತಿರುವುದರಿಂದ ಸದರಿ ಕಟ್ಟಡವನ್ನು ದುರಸ್ಥಿಗೊಳಿಸುವ ಬಗ್ಗೆ ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ | ಸಹಾಯಕ ಅಬಿಯಂತರರು (ವಾರ್ಡ್ ನಂ-01) |
| 03 | ವಾರ್ಡ್ ನಂ -01ರ ವ್ಯಾಪ್ತಿಯಲ್ಲಿರುವ ವೆಂಕಟಾಲ ಗ್ರಾಮದಲ್ಲಿ ಹೊಸದಾಗಿ ಬೋರ್‌ವೆಲ್ ಕೋರೆದು ನೀರು ಪೂರೈಸಬೇಕೆಂದು ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಹಾಲಿ ಇರುವ ಸಂಪರ್ಕವನ್ನು ಕಡಿತಗೊಳಿಸಲಾಗಿದ್ದು, ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ | ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸುವಂತೆ ನೋಡಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |

| | | | |
|---|---|---|---|
| 04 | ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ವೆಂಕಟಾಲ ಗ್ರಾಮದಲ್ಲಿ ಹೊಸದಾಗಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಮಾಡಿದ್ದು, ಮಾನ್ಯ ಶಾಸಕರು ಯಲಹಂಕ ವಿಧಾನ ಸಭಾ ಕ್ಷೇತ್ರರವರು ಉದ್ಘಾಟನೆ ಮಾಡಿರುತ್ತಾರೆ. ಆದರೆ ಈ ಆರ್.ಒ ಪ್ಲಾಂಟ್‌ಗೆ ಬೋರ್‌ವೆಲ್‌ನಿಂದ ನೀರಿನ ಸಂಪರ್ಕ ನೀಡಿರುವುದಿಲ್ಲ. ಇದರ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸುವಂತೆ ನೊಡೆಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |
| 05 | ವಾರ್ಡ್ ನಂ-01ರ ವ್ಯಾಪ್ತಿಯಲ್ಲಿ ಹಾಲಿ ಇರುವ ಬೊರ್‌ವೆಲ್‌ಗಳಲ್ಲಿ ರಾತ್ರೋ ರಾತ್ರಿ ಪಂಪ್ ಮೊಟಾರ್ ತೆಗೆಯುತ್ತಿರುವ ಬಗ್ಗೆ ಸ್ಥಳೀಯ ನಿವಾಸಿಗಳು ಅಕ್ಷೇಪಣೆ ವ್ಯಕ್ತಪಡಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸುವಂತೆ ನೊಡೆಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |
| 06 | ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ರೈತರ ಸಂತೆ ಮುಂಭಾಗದಲ್ಲಿರುವ ತರಕಾರಿ ಅಂಗಡಿಗಳನ್ನು ಮತ್ತು ತಳ್ಳುವ ಗಾಡಿಗಳನ್ನು ಮತ್ತು ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ಮಾಡುವವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಮನವಿ ಸಲ್ಲಿಸಿದರು. | ಹಿರಿಯ ಆರೋಗ್ಯ ಪರಿವೀಕ್ಷರಿಗೆ ಪಾದಚರಿ ಮಾರ್ಗಗಳಲ್ಲಿ ವ್ಯಾಪಾರ ಮಾಡುವವರ ವಿರುದ್ಧ ಕ್ರಮ ಜರೂಗಿಸುವಂತೆ ನೊಡೆಲ್ ಅಧಿಕಾರಿಗಳು ತಿಳಿಸಿದರು. | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01. |
| 07 | ವಾರ್ಡ್ ನಂ -01ರ ವ್ಯಾಪ್ತಿಯಲ್ಲಿರುವ ವೆಂಕಟಾಲ ಲೇಕ್ ವೀವ್ ಬಡಾವಣೆ ಬೀದಿ ದೀಪಗಳು ಉರಿಯುತ್ತಿರುವುದಿಲ್ಲ. ಹಾಗೂ ಎರಡು ಕಂಪನಿಯವರಿಗೆ ಗುತ್ತಿಗೆ ನೀಡಿರುವುದರಿಂದ ಬೀದಿ ದೀಪಗಳ ನಿರ್ವಹಣೆ ಸರಿಯಾಗಿ ನಿರ್ವಹಿಸುತ್ತಿರುವುದಿಲ್ಲ ಎಂದು ಸ್ಥಳೀಯರು ಸಭೆಯಲ್ಲಿ ದೂರನ್ನು ಸಲ್ಲಿಸಿದರು. | ಶ್ರೀ.ಬಾಬುರೆಡ್ಡಿ ಸಹಾಯಕ ಅಭಿಯಂತರರು ವಿದ್ಯುತ್ ರವರಿಗೆ ಸಾರ್ವಜನಿಕರ ದೂರುಗಳನ್ನು ಸರಿಪಡಿಸುವಂತೆ ನೊಡೆಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. | ಶ್ರೀ.ಬಾಬುರೆಡ್ಡಿ, ಸಹಾಯಕ ಅಭಿಯಂತರರು ವಿದ್ಯುತ್ |
| 08 | ವಾರ್ಡ್ ನಂ-01ರಲ್ಲಿರುವ ಕೆ.ಹೆಚ್.ಬಿ ಕಾಲೋನಿಯಲ್ಲಿ ಬ್ಲಾಕ್ ಸ್ಪಾಟ್‌ಅಲ್ಲಿ ಕಸದ ರಾಶಿಇದ್ದು ತೆರವುಗೊಳಿಸುವಂತೆ ಹಾಗೂ ಪೌರ ಕಾರ್ಮಿಕರಿಗೆ ಕೈ ಗ್ಲೌಸ್‌ಗಳು ಹಾಗೂ ಮುಂಜಾಗ್ರತ ಕ್ರಮಗಳನ್ನು ಕೈಗೊಂಡಿರುವುದಿಲ್ಲ ಎಂದು ಯಲಹಂಕ ಹೊಸಬೀದಿ ನಿವಾಸಿಯಾದ ಶ್ರೀ.ಹೇಮರಾಜ್ ರವರು ಸಭೆಗೆ ದೂರನ್ನು ಸಲ್ಲಿಸಿದರು. | ಸಭೆಯಲ್ಲಿ ಹಾಜರಿದ್ದ ವೆಂಕಟೇಶ್ ಮೂರ್ತಿ ಹಿರಿಯ ಆರೋಗ್ಯ ಪರಿವಿಕ್ಷಕರಿಗೆ ಕ್ರಮ ವಹಿಸಲು ನೊಡೆಲ್ ಅಧಿಕಾರಿಗಳು ಸೂಚಿಸಿದರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01. |
| 09 | ವಾರ್ಡ್ ನಂ -01ರ ವ್ಯಾಪ್ತಿಯಲ್ಲಿರುವ ಸುರಬಿ ಬಡಾವಣೆ ಮುನೇಶ್ವರ ದೇವಸ್ಥಾನದ ಹತ್ತಿರ ಕುಡಿಯುವ ನೀರಿನ ಸಂಪರ್ಕದ ಪೈಪ್‌ಗಳನ್ನು ಚರಂಡಿಯಲ್ಲಿ ಆಳವಡಿಸಿರುವ ಬಗ್ಗೆ ಹಾಗೂ ಯಲಹಂಕ ಬಾಂಗ್ಲಾ ಶಾಲೆಯ ಹತ್ತಿರ ಶುದ್ಧ ಕುಡಿಯುವ ನೀರಿನ ಸಂಪರ್ಕ ಘಟಕದಲ್ಲಿ ರೂ. 5.00 ಕಾಯಿನ್ ರ ಬದಲಾಗಿ ಸಾರ್ವಜನಿಕರ ಹತ್ತಿರ ರೂ. 8.00 ವಸೂಲಿ ಮಾಡುತ್ತಿರುವುದಾಗಿ ಶ್ರೀ. ಹೇಮರಾಜ್ ರವರು ಸಭೆಗೆ ದೂರನ್ನು ಸಲ್ಲಿಸಿರುತ್ತಾರೆ. | ಆರ್.ಒ.ಪ್ಲಾಂಟ್ ನಲ್ಲಿ 8.00 ವಸೂಲಿ ಮಾಡುತ್ತಿರುವವರಿಗೆ ನೊಟಿಸ್ ಜಾರಿ ಮಾಡುವಂತೆ ನೊಡೆಲ್ ಅಧಿಕಾರಿಗಳು ವಾರ್ಡ್‌ನ ಅಭಿಯಂತರರಿಗೆ ಸೂಚಿಸಿದರು | ಸಹಾಯಕ ಅಭಿಯಂತರರು ವಾರ್ಡ್ ನಂ-01. |
| 10 | ಅಂಗಡಿಗಳಿಗೆ ಆರೋಗ್ಯ ಇಲಾಖೆಯಿಂದ ಪರವಾನಗಿ ನೀಡುತ್ತಿರುವುದಿಲ್ಲ ಎಂದು ಹಾಗೂ ಪ್ಲಾಸ್ಟಿಕ್ ಅನ್ನು ಸೀಸ್ ಮಾಡುತ್ತಿಲ್ಲವೆಂದು ಶ್ರೀ. ಹೇಮರಾಜ್ ರವರು | ಸಭೆಯಲ್ಲಿ ಹಾಜರಿದ್ದ ವೆಂಕಟೇಶ್ ಮೂರ್ತಿ ಹಿರಿಯ ಆರೋಗ್ಯ ಪರಿವಿಕ್ಷಕರಿಗೆ ಕ್ರಮ ವಹಿಸಲು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01. |

| | | | |
|---|---|---|---|
| | ಸಭೆಗೆ ದೂರನ್ನು ಸಲ್ಲಿಸಿರುತ್ತಾರೆ. | ನೋಡೆಲ್ ಅಧಿಕಾರಿಗಳು ಸೂಚಿಸಿದರು | |
| 11 | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸಮರ್ಪಕವಾಗಿ ಪೂರೈಸದೆ ಇದ್ದಲ್ಲಿ ಧರಣಿ ಮಾಡುವುದಾಗಿ ವೆಂಕಟಾಲ ಗ್ರಾಮದ ಸಾರ್ವಜನಿಕರು ದೂರನ್ನು ಸಲ್ಲಿಸಿದರು. | ಬಿ.ಡಬ್ಲ್ಯೂಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆ) |
| 12 | ಡಾ. ಶಾಲಿನಿಯವರು (ಎ.ಪಿ.ಟಿ.ಎಸ್. ಕೋವಿಡ್ ವೈದ್ಯಾಧಿಕಾರಿಗಳು) ರವರು ಮಾತನಾಡಿ ಕೋವಿಡ್ ಪರೀಕ್ಷೆಗೆ ಸಂಬಂದಿಸಿದಂತೆ, ಸಾರ್ವಜನಿಕರು ಆಸಕ್ತಿ ತೋರಿಸುತ್ತಿರುವುದಿಲ್ಲ ವೆಂದು ಹಾಗೂ ನಮಗೆ ಪ್ರತಿದಿನ 320 ಜನ ಟಾರ್ಗೇಟ್ ನೀಡುತ್ತಿದ್ದು, ವಾರ್ಡ್ ನಂ-01 ಮತ್ತು 02 ರಲ್ಲಿರುವ ಸಾರ್ವಜನಿಕರು ಕೊವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಮನಹೊಲಿಕೆ ಮಾಡುವಂತೆ ಸಭೆಯಲ್ಲಿ ಮನವಿ ಸಲ್ಲಿಸಿದರು. | ಸಭೆಯಲ್ಲಿ ಹಾಜರಿದ್ದ ವೆಂಕಟೇಶ್ ಮೂರ್ತಿ ಹಿರಿಯ ಆರೋಗ್ಯ ಪರಿವಿಕ್ಷಕರಿಗೆ ಕ್ರಮ ವಹಿಸಲು ನೋಡೆಲ್ ಅಧಿಕಾರಿಗಳು ಸೂಚಿಸಿದರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01. |
| 13 | ಮಾರುತಿನಗರ 4ನೇ ಅಡ್ಡರಸ್ತೆ, 8ನೇ ಅಡ್ಡರಸ್ತೆ, 9ನೇ ಅಡ್ಡರಸ್ತೆಗಳಲ್ಲಿ ವೆಂಕಟಾಲ ಯಲಹಂಕ ಕೆರೆ ಲೇಕ್ ವೀವ್ ಬಡಾವಣೆ ಬಾಗಲೂರು ಕ್ರಾಸ್ ಜಯಮುನಿ ಬಡಾವಣೆಗಳಲ್ಲಿ ಬೀದಿ ದೀಪಗಳ ನಿರ್ವಹಣೆ ಸರಿಇರುವುದಿಲ್ಲ ವೆಂದು ಸ್ಥಳೀಯರಾದ ಶ್ರೀ.ಶಂಕರಪ್ಪ ನವರು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು. ಹಾಗೂ ಹಾವುಗಳು ಹೆಚ್ಚಾಗಿದ್ದು, ಸಾರ್ವಜನಿಕರಿಗೆ ಒಡಾಡಲು ತೊಂಧರೆ ಉಂಟಾಗುತ್ತಿರುವ ಬಗ್ಗೆ ಕೆಲವು ಕಡೆ ಕ್ಯಾಮೆರಾಗಳನ್ನು ಆಳವಡಿಸುವಂತೆ ಸಭೆಯಲ್ಲಿ ಕೋರಿದರು. | ಸಭೆಯಲ್ಲಿ ಹಾಜರಿದ್ದ ಶ್ರೀ.ಬಾಬುರೆಡ್ಡಿ ಸಹಾಯಕ ಅಭಿಯಂತರರು ವಿದ್ಯುತ್ ರವರಿಗೆ ಬೀದಿ ದೀಪಗಳ ನಿರ್ವಹಣೆ ಮಾಡಲು ನೋಡೆಲ್ ಅಧಿಕಾರಿಗಳು ಸೂಚಿಸಿದರು. ಹಾಗೂ ಬೇಸ್ಕಾಂ ಇಲಾಖೆಗೆ ಪತ್ರ ಬರೆದು ಕೆಲವು ಕಡೆ ಲೈಟ್‌ಗಳನ್ನು ಬಿಚ್ಚುಕೊಂಡು ಹೋಗಿರುವುದರ ಬಗ್ಗೆ ವಿವರಣೆ ನೀಡುವಂತೆ ಪತ್ರ ವ್ಯವಹಾರ ಮಾಡುವಂತೆ ಸಭೆಯಲ್ಲಿ ತಿಳಿಸಿದರು. | ಶ್ರೀ.ಬಾಬುರೆಡ್ಡಿ ಸಹಾಯಕ ಅಭಿಯಂತರರು ವಿದ್ಯುತ್ ಮತ್ತು ಸಹಾಯಕ ಅಭಿಯಂತರರು ವಾರ್ಡ್ ನಂ-1 |
| 14 | ವೆಂಕಟಾಲ ಗ್ರಾಮದಲ್ಲಿ ನೀರಿನ ಸಂಪರ್ಕ ಕಡಿತಗೊಳಿಸಿರುವುದರ ಬಗ್ಗೆ, ಸುಮಾರು 6 ತಿಂಗಳಿಂದ ನೀರಿನ ಸಮಸ್ಯೆ ಎದುರಿಸುತ್ತಿರುವ ಬಗ್ಗೆ, ಹಲವಾರು ಭಾರಿ ಮನವಿ ಸಲ್ಲಿಸದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಹಾಗೂ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ, ಹಾಗೂ ಖಾಲಿ ಬಿಂದಿಗೆ ಆಂದೋಲನ ನಡೆಸುವುದಾಗಿ ಸ್ಥಳಿಯ ನಿವಾಸಿಗಳಾದ ಶ್ರೀ.ಶಂಕರಪ್ಪ ಹಾಗೂ ಇನ್ನಿತರರು ಸಭೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್. ಇಲಾಖೆಯ ಬಗ್ಗೆ ಅಕ್ಷೇಪಣೆ ವ್ಯಕ್ತಪಡಿಸಿದರು. | ಇದರ ಸಲುವಾಗಿ ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆಯ ಮೇಲಾಧಿಕಾರಿಗಳಿಗೆ ಪತ್ರ ಬರೆಯುವುದಾಗಿ ನೋಡೆಲ್ ಅಧಿಕಾರಿಗಳು ಸಬೆಗೆ ತಿಳಿಸಿದರು. ಹಾಗೂ ಶ್ರೀ.ರಾಮಲಿಂಗಪ್ಪ ರವರಿಗೆ ಮುಂದಿನ ಸಭೆಗೆ ಸಂಬಂದಿಸಿದ ಅಧಿಕಾರಿಗಳನ್ನು ಸಬೆಗೆ ಹಾಜರಾಗಲು ತಿಳಿಸುವಂತೆ ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ. |
| 15 | ಅಯ್ಯಪ್ಪ ಸ್ವಾಮಿ ದೇವಸ್ಥಾನದ ರಸ್ತೆಗಳಲ್ಲಿ ಹಾಗೂ ಸ್ಯಾನಿಟರಿ ಕೊಳಚೆ ನೀರನ್ನು ತೆರದ ಚರಂಡಿಗಳಿಗೆ ಹರಿದುಬಿಡುತ್ತಿರುವ ಬಗ್ಗೆ ಹಾಗೂ ಉಡುಪಿ ಗ್ರ್ಯಾಂಡ್ ಹತ್ತಿರ ಒಳಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತಿರುವ ಬಗ್ಗೆ ಸ್ಥಳೀಯ ನಿವಾಸಿಗಳಾದ ಶ್ರೀ.ಚೇಮರಾಜ್ ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ | ಇದರ ಸಲುವಾಗಿ ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆಯ ಮೇಲಾಧಿಕಾರಿಗಳಿಗೆ ಪತ್ರ ಬರೆಯುವುದಾಗಿ ನೋಡೆಲ್ ಅಧಿಕಾರಿಗಳು ಸಬೆಗೆ ತಿಳಿಸಿದರು. ಹಾಗೂ ಶ್ರೀ.ರಾಮಲಿಂಗಪ್ಪ ರವರಿಗೆ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ. |

| | | | |
|---|---|---|---|
| | ಅಧಿಕಾರಿಗಳ ವಿರುದ್ಧ ಅಕ್ಷೇಪಣೆ ವ್ಯಕ್ತಪಡಿಸಿದರು. | ಮುಂದಿನ ಸಭೆಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಭೆಗೆ ಹಾಜರಾಗಲು ತಿಳಿಸುವಂತೆ ಸೂಚಿಸಿದರು. | |
| 16 | ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಗಾರ್ಬೇಜ್ ಪಾಯಿಂಟ್‌ಗಳಿಗೆ ಬರುತ್ತಿಲ್ಲವೆಂದು ಹಸಿ ಕಸ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಬೇರ್ಪಡಿಸಿ ನೀಡಲು ಹಾಗೂ ಕೆಲವು ಪೌರ ಕಾರ್ಮಿಕರು ಒಣಕಸಕ್ಕೆ ಬೆಂಕಿ ಹಚ್ಚುತ್ತಿರುವ ಬಗ್ಗೆ ಅಕ್ಷೆಪಣೆ ವ್ಯಕ್ತಪಡಿಸಿದರು. | ಸಭೆಯಲ್ಲಿ ಹಾಜರಿದ್ದ ವೆಂಕಟೇಶ್ ಮೂರ್ತಿ ಹಿರಿಯ ಆರೋಗ್ಯ ಪರಿವಿಕ್ಷಕರಿಗೆ ಕ್ರಮ ವಹಿಸಲು ನೊಡೆಲ್ ಅಧಿಕಾರಿಗಳು ಸೂಚಿಸಿದರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01. |

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾದನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸದಸ್ಯ ಕಾರ್ಯದರ್ಶಿ | ವಾರ್ಡ್ ಸಮಿತಿ ಅಧ್ಯಕ್ಷರು |
| ಹಾಗೂ ಸಹಾಯಕ ಅಭಿಯಂತರರು | ಹಾಗೂ ವಾರ್ಡ್‌ನ ನೊಡೆಲ್ ಅಧಿಕಾರಿಗಳು |
| ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಡ) | ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಡ) |

ಪ್ರತಿಯನ್ನು:

ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.

1. ಶ್ರೀ.ರಜನಿಕಾಂತ್ ಮಲ್ಲಿ, ಅಧ್ಯಕ್ಷರು ಹಾಗೂ ನೊಡಲ್ ಅಧಿಕಾರಿಗಳು.

## ಅಧಿಕಾರಿಗಳ ಮಾಹಿತಿಗಾಗಿ.

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ವಲಯ ಅರಣ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬೃ.ನಿ.ಗಾ) ವಿಭಾಗ ರವರ ಮಾಹಿತಿಗಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರ ಸೂಕ್ತ ಕ್ರಮಕ್ಕಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ವಿಭಾಗ ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಯಲಹಂಕರವರ ಸೂಕ್ತ ಕ್ರಮಕ್ಕಾಗಿ.